# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ
## ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ

## ಕೃಷಿ, ವಿಜ್ಞಾನ, ತಂತ್ರಜ್ಞಾನ ಮತ್ತು ವೈದ್ಯಕೀಯ ವಿಷಯಗಳಲ್ಲಿ ಕನ್ನಡದಲ್ಲಿ ಪುಸ್ತಕಗಳನ್ನು ಪ್ರಕಟಿಸಿರುವ ಲೇಖಕರಿಗೆ ರಾಜ್ಯ ಮಟ್ಟದ 'ಶ್ರೇಷ್ಠ ಪುಸ್ತಕ' ಬಹುಮಾನ

**ಮಾರ್ಗಸೂಚಿ**

ಕನ್ನಡದಲ್ಲಿ ವಿಜ್ಞಾನ ವಿಷಯದ ಪುಸ್ತಕಗಳ ಬರವಣಿಗೆಯನ್ನು ಪ್ರೋತ್ಸಾಹಿಸಲು ಹಾಗೂ ಕನ್ನಡದಲ್ಲಿ ವಿಜ್ಞಾನದ ಪುಸ್ತಕಗಳು ಹೆಚ್ಚು ಹೆಚ್ಚಾಗಿ ಹೊರಬರಲು ಅನುವು ಮಾಡಿಕೊಡುವ ಸಲುವಾಗಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ವತಿಯಿಂದ 2009-10ನೇ ಸಾಲಿನಿಂದ ಶ್ರೇಷ್ಠ ಲೇಖಕರನ್ನು ಗುರುತಿಸಿ ಸನ್ಮಾನ ಹಾಗೂ ಪುರಸ್ಕಾರವನ್ನು ನೀಡಿ ಗೌರವಿಸಲಾಗುತ್ತಿದೆ. ಈ ಬಹುಮಾನವನ್ನು ಪ್ರತಿ ಎರಡು ವರ್ಷಗಳಿಗೊಮ್ಮೆ ಕೃಷಿ, ವಿಜ್ಞಾನ, ತಂತ್ರಜ್ಞಾನ ಮತ್ತು ವೈದ್ಯಕೀಯ ವಿಷಯಗಳಲ್ಲಿ ನೀಡಲಾಗುತ್ತಿದೆ.

**ಸನ್ಮಾನ ಮತ್ತು ಪುರಸ್ಕಾರ**

ಪುಸ್ತಕಗಳ ಸಂಖ್ಯೆಗನುಗುಣವಾಗಿ ಪ್ರತಿ ವಿಷಯಕ್ಕೆ ಗರಿಷ್ಠ 02 ಬಹುಮಾನಗಳನ್ನು ನೀಡಲಾಗುವುದು. ಆಯ್ಕೆಯಾದ ಲೇಖಕರಿಗೆ ರೂ. 25 ಸಾವಿರಗಳ ನಗದು ಪುರಸ್ಕಾರ ಹಾಗೂ ಅಭಿನಂದನಾ ಪತ್ರವನ್ನು ನೀಡಿ ಸನ್ಮಾನಿಸಲಾಗುವುದು.

**ಪುಸ್ತಕಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : ಜನವರಿ 05, 2026 (ಸೋಮವಾರ)**

**ಪುರಸ್ಕಾರಕ್ಕೆ ಪುಸ್ತಕಗಳನ್ನು ಕಳುಹಿಸುವ ವಿಧಾನ**: ಪುಸ್ತಕಗಳನ್ನು ಕಳುಹಿಸಲು ಬಯಸುವ ಲೇಖಕರು ಪುಸ್ತಕದ ನಾಲ್ಕು ಪ್ರತಿಗಳನ್ನು ಭರ್ತಿಮಾಡಿದ ಅರ್ಜಿಯೊಂದಿಗೆ ಈ ಕೆಳಕಂಡ ವಿಳಾಸಕ್ಕೆ ಕಳುಹಿಸುವುದು:

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ
ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ತೋಟಗಾರಿಕೆ ವಿಜ್ಞಾನಗಳ ಕಾಲೇಜು ಆವರಣ,
ದೊಡ್ಡಬೆಟ್ಟಹಳ್ಳಿ ಬಡಾವಣೆ ಬಸ್ ನಿಲ್ದಾಣದ ಹತ್ತಿರ, ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು – 560 097.

**ಅರ್ಹತೆ ಮತ್ತು ಆಯ್ಕೆ ಮಾಡುವಾಗ ಪರಿಗಣಿಸಲಾಗುವ ಅಂಶಗಳು**

- ಪುಸ್ತಕಗಳು ಕೃಷಿ, ವಿಜ್ಞಾನ, ತಂತ್ರಜ್ಞಾನ ಮತ್ತು ವೈದ್ಯಕೀಯ ವಿಷಯಗಳಲ್ಲಿ ಕನ್ನಡದಲ್ಲಿ ಪ್ರಕಟಿತವಾಗಿರಬೇಕು.
- ಕೃಷಿ, ವಿಜ್ಞಾನ, ತಂತ್ರಜ್ಞಾನ ಮತ್ತು ವೈದ್ಯಕೀಯ ವಿಷಯಗಳಲ್ಲಿ **ಜನವರಿ 2023 ರಿಂದ ಡಿಸೆಂಬರ್ 2025** ರವರೆಗೆ ಕನ್ನಡದಲ್ಲಿ ಪ್ರಕಟಿಸಿರುವ ಪುಸ್ತಕಗಳು ಅರ್ಹ.
- ಯಾವುದೇ ತರಗತಿ, ಪದವಿ-ಪೂರ್ವ, ಪದವಿ, ಸ್ನಾತಕೋತ್ತರ ಪದವಿ ಅಥವಾ ಇನ್ನಿತರ ಯಾವುದೇ ಕೋರ್ಸ್ ಗಳ ಪಠ್ಯ ಪುಸ್ತಕಗಳು ಅನರ್ಹವಾಗಿದ್ದು, ಬಹುಮಾನಕ್ಕೆ ಪರಿಗಣಿಸಲಾಗುವುದಿಲ್ಲ.
- ಬಹುಮಾನಕ್ಕೆ ಪುಸ್ತಕಗಳನ್ನು ಆಹ್ವಾನಿಸಿ ನೀಡಿರುವ ಪ್ರಕಟಣೆಯಲ್ಲಿ ಸೂಚಿಸಿರುವ ಅವಧಿಯಲ್ಲಿ ಪುಸ್ತಗಳು ಪ್ರಕಟಗೊಂಡಿರುವ ಮತ್ತು ಸೂಚಿಸಿರುವ ಕೊನೆಯ ದಿನಾಂಕದೊಳಗೆ ಅಕಾಡೆಮಿ ಕಛೇರಿಗೆ ತಲುಪಿರುವ ಪುಸ್ತಕಗಳನ್ನು ಮಾತ್ರ ಬಹುಮಾನಕ್ಕೆ ಪರಿಗಣಿಸುವುದು.
- ಮುದ್ರಣ ರೂಪ (Printed) ದಲ್ಲಿರುವ ಪುಸ್ತಕಗಳನ್ನು ಮಾತ್ರ ಪರಿಗಣಿಸುವುದು. ಕೈಬರಹ, ಡಿಜಿಟಲ್ ಅಥವಾ ಆಡಿಯೋ ವಿಜುಯಲ್ ಪುಸ್ತಕಗಳನ್ನು ಪರಿಗಣಿಸಲಾಗುವುದಿಲ್ಲ.
- ಈಗಾಗಲೇ ಪ್ರಕಟಗೊಂಡಿರುವ ಪುಸ್ತಕದ ಸಂಕ್ಷಿಪ್ತ/ಮುಖ್ಯಾಂಶ/ಲೇಖನಗಳ ಸಂಗ್ರಹ ಅಥವಾ ಆಯ್ದ ಭಾಗಗಳನ್ನು ಒಳಗೊಂಡ ಪುಸ್ತಕವು ಬಹುಮಾನಕ್ಕೆ ಅರ್ಹವಾಗಿರುವುದಿಲ್ಲ.

- ಹಲವು ಲೇಖಕರ ಸಂಶೋಧನಾ ಪತ್ರ (Research Paper)/ ಲೇಖನಗಳನ್ನು (Articles) ಒಳಗೊಂಡು ಸಂಪಾದಕ ಗ್ರಂಥ ಅಥವಾ ಪುಸ್ತಕಗಳು ಅರ್ಹವಾಗಿರುವುದಿಲ್ಲ.
- 2018 ರಿಂದ ಈಚೆಗೆ ಅಕಾಡೆಮಿಯಿಂದ ಯಾವುದೇ ವಿಷಯದಲ್ಲಿ ಶ್ರೇಷ್ಠ ಲೇಖಕ/ಪುಸ್ತಕ ಬಹುಮಾನವನ್ನು ಪಡೆದ ಲೇಖಕರನ್ನು ಪರಿಗಣಿಸಲಾಗುವುದಿಲ್ಲ (2018ಕ್ಕಿಂತ ಹಿಂದೆ ಅಕಾಡೆಮಿ ಪುಸ್ತಕ ಬಹುಮಾನ ಪಡೆದ ಲೇಖಕರು ಪುಸ್ತಕ ಸಲ್ಲಿಸಬಹುದು)
- ಪುಸ್ತಕ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ ಅಥವಾ ಇನ್ನಾವುದೇ ಸಂಸ್ಥೆಗಳ ಪ್ರಶಸ್ತಿ/ಪುರಸ್ಕಾರಕ್ಕೆ ಆಯ್ಕೆಗೊಂಡ ಪುಸ್ತಕಗಳನ್ನು ಪರಿಗಣಿಸುವಂತಿಲ್ಲ.
- ಸರ್ಕಾರಿ ವರದಿಗಳು ಮತ್ತು ಇಲಾಖೆಗಳು/ವಿಭಾಗಗಳು ನಿಯಮಿತವಾಗಿ/ವಾಡಿಕೆಯಾಗಿ ಹೊರತರುತ್ತಿರುವ ಲೇಖನಗಳು/ವರದಿಗಳು ಇತ್ಯಾದಿಗಳನ್ನು ಪರಿಗಣಿಸುವಂತಿಲ್ಲ.
- ಪದ ಕೋಶ ಮತ್ತು ಅನುವಾದಿತ ಕೃತಿಗಳನ್ನು ಗಣನೆಗೆ ತೆಗೆದುಕೊಳ್ಳುವಂತಿಲ್ಲ.
- ಅಪರಾಧ ಹಿನ್ನೆಲೆಯಲ್ಲಿ ಆರೋಪಕ್ಕೊಳಪಟ್ಟಿರುವ/ ವಿಚಾರಣೆಗೊಳಪಟ್ಟಿರುವ/ ಕಾನೂನು ಕ್ರಮ ಎದುರಿಸುತ್ತಿರುವ/ಶಿಕ್ಷೆಗೊಳಪಟ್ಟಿರುವ ಅಥವಾ ಇನ್ನಿತರ ಸಮಾಜ ಬಾಹಿರ ಕ್ರಿಯೆಯಲ್ಲಿ ಪಾಲ್ಗೊಂಡಿರುವ ಲೇಖಕರು ಅರ್ಜಿ ಸಲ್ಲಿಸಲು ಅನರ್ಹರಾಗಿರುತ್ತಾರೆ. ಒಂದು ವೇಳೆ ಲೇಖಕರು ಬಹುಮಾನಕ್ಕೆ ಆಯ್ಕೆಯಾಗಿ ಅಕಾಡೆಮಿಯು ಪ್ರಕಟಿಸಿದ ನಂತರ ಲೇಖಕರು ಮೇಲ್ಕಂಡ ಅನರ್ಹತೆ ಹೊಂದಿರುವ ಬಗ್ಗೆ ತಿಳಿದು ಬಂದರೆ ಅಂತವರಿಗೆ ಬಹುಮಾನವನ್ನು ನೀಡಲಾಗುವುದಿಲ್ಲ.
- ಈ ಬಹುಮಾನದ ಪಾವಿತ್ರತೆಯನ್ನು ಕಾಪಾಡುವಲ್ಲಿ ಲೇಖಕರು ಸಹಕರಿಸುವುದು. ಯಾವುದೇ ರೀತಿಯಾದ ಪ್ರಭಾವ/ಮಧ್ಯಸ್ತಿಕೆ ವಹಿಸುವ ಲೇಖಕರನ್ನು ಯಾವುದೇ ಮುನ್ಸೂಚನೆ ಇಲ್ಲದೆ ಅನರ್ಹಗೊಳಿಸಲಾಗುವುದು.
- ಬಹುಮಾನಕ್ಕೆ ಸಲ್ಲಿಕೆಯಾದ ಪುಸ್ತಕಗಳನ್ನು ಅಕಾಡೆಮಿಯ ತಜ್ಞ ಸಮಿತಿಯು ಅಕಾಡೆಮಿಯ ಮಾರ್ಗಸೂಚಿಯ ಪ್ರಕಾರ ವಿಷಯವಾರು ಆಯ್ಕೆ ಮಾಡಿ ಪ್ರತಿ ವಿಷಯದಲ್ಲಿ ಎರಡು/ಮೂರು ಪರಿಣಿತರಿಗೆ ಮೌಲ್ಯಮಾಪನಕ್ಕೆ ಕಳುಹಿಸುವುದು.
- ಬಹುಮಾನಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡುವಾಗ ಪರಿಗಣಿಸಬೇಕಾದ ಮಾನದಂಡಗಳು ಈ ಕೆಳಕಂಡಂತಿವೆ:

| ಮೌಲ್ಯಮಾಪನದ ಮಾನದಂಡ ಮತ್ತು ಅಂಕಗಳು | | | |
|---|---|---|---|
| ಉಪಯುಕ್ತತೆ<br>(ಗರಿಷ್ಠ 50 ಅಂಕ) | ಸ್ವಂತಿಕೆ<br>(ಗರಿಷ್ಠ 30 ಅಂಕ) | ಸರಳತೆ<br>(ಗರಿಷ್ಠ 20 ಅಂಕ) | ಒಟ್ಟು ಅಂಕಗಳು<br>(100) |

ಉಪಯುಕ್ತತೆ: ಪುಸ್ತಕವು ಜನಸಾಮಾನ್ಯರಿಗೆ ಉಪಯೋಗವಾಗಲಿದೆಯೇ. ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಹಾಗೂ ಜನಜೀವನ ಮಟ್ಟದಲ್ಲಿ ಸುಧಾರಣೆಯಾಗಲಿದೆಯೇ. ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನಕ್ಕೆ ಸಹಕಾರಿಯಾಗಿದೆಯೇ.

ಸ್ವಂತಿಕೆ : ಪುಸ್ತಕದ ವಿಷಯದಲ್ಲಿ ಸ್ವಂತಿಕೆಯಿದೆಯೇ. ಪುಸ್ತಕದ ವಿಷಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಯ ಬಗ್ಗೆ ವಿಶ್ಲೇಷಿಸಲಾಗಿದೆಯೇ. ವಿಷಯದ ಮಂಡನೆಗೆ/ಸಂವಹನಕ್ಕೆ/ದೃಢೀಕರಣಕ್ಕೆ ಸ್ವಂತ ಸಂಶೋಧನೆಯ ಅಂಕಿ ಅಂಶಗಳನ್ನು ಉಪಯೋಗಿಸಲಾಗಿದೆಯೇ.

ಸರಳತೆ : ಪುಸ್ತಕವನ್ನು ಜನಸಾಮಾನ್ಯರ ಮಟ್ಟಕ್ಕೆ ಸರಳವಾಗಿ ಬರೆಯಲಾಗಿದೆಯೇ. ಭಾಷೆಯ ಶೈಲಿ, ವಾಕ್ಯಗಳ ರಚನೆ, ಪದಗಳ ಬಳಕೆ ಮತ್ತು ವಿಷಯದ ಸಂವಹನ ತಂತ್ರ ಇವುಗಳಲ್ಲಿ ಎಷ್ಟರ ಮಟ್ಟಿಗೆ ಲೇಖಕರು ಯಶಸ್ವಿಯಾಗಿದ್ದಾರೆ.